**ದಿನಾಂಕ: 12/09/2012 ರಂದು ಬೆಳಿಗ್ಗೆ ಶಿಕ್ಷಕರ ಸದನದಲ್ಲಿ ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರ ಸಭೆಯ ನಡವಳಿ.**

*****

ಹಾಜರಾಗಿದ್ದ ಅಧಿಕಾರಿಗಳು:–

1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು. (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ಮಾನ್ಯ ಯೋಜನಾ ನಿರ್ದೇಶಕರು , ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಶಿಕ್ಷಣ ಅಭಿಯಾನ , ಬೆಂಗಳೂರು
4) ಅಪರ ಆಯುಕ್ತರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ಅಪರ ಆಯುಕ್ತರು, ಧಾರವಾಡ.
6) ಅಪರ ಆಯುಕ್ತರು, ಗುಲಬರ್ಗಾ.
7) ನಿರ್ದೇಶಕರು, (ಪ್ರೌಢ ಶಿಕ್ಷಣ).
8) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
9) ನಿರ್ದೇಶಕರು, (ಎಸ್.ಎಸ್.ಎ.)
10) ನಿರ್ದೇಶಕರು, (ಆರ್.ಎಂ.ಎಸ್.ಎ)
11) ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
12) ವ್ಯವಸ್ಥಾಪಕ ನಿರ್ದೇಶಕರು , ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) , ಬೆಂಗಳೂರು
13) ಸಹನಿರ್ದೇಶಕರು, (ಎಸ್.ಎಸ್.ಎ.)
14) ಸಹ ನಿರ್ದೇಶರು , ಕೆ ಎಸ್ ಇ ಇ ಬಿ , ಮಲ್ಲೇಶ್ವರಂ , ಬೆಂಗಳೂರು
15) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು,
16) ಕಛೇರಿಯ ಅಧಿಕಾರಿಗಳು, ಹಾಗೂ ಸಿಬ್ಬಂದಿ ವರ್ಗದವರು.

ಪ್ರಾರಂಭದಲ್ಲಿ ಆಯುಕ್ತರ ಕಾರ್ಯಾಲಯದ ಯೋಜನಾ ಶಾಖೆಯ ಉಪನಿರ್ದೇಶಕರು ಮಾನ್ಯ ಕಾರ್ಯದರ್ಶಿಗಳು , ಮಾನ್ಯ ಆಯುಕ್ತರು ಹಾಗು ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಹಾರ್ದಿಕ ಸುಸ್ವಾಗತವನ್ನು ಕೋರಿದರು. ನಂತರದಲ್ಲಿ , ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಈಗಾಗಲೇ ಶಾಲೆಗಳು ಪ್ರಾರಂಭವಾಗಿ 4 ತಿಂಗಳು ಸಂದಿದ್ದು , ಮಕ್ಕಳ ಉಚಿತ ಶಿಕ್ಷಣದ ಅನ್ವಯ ಹಲವು ಕೆಲಸ ಕಾರ್ಯಗಳು ಬಾಕಿ ಇವೆ

ಎಂಬುದನ್ನು ಗಮನಿಸಿ ಮಕ್ಕಳಿಗೆ ಗುಣಾತ್ಮಕವಾದ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿನ ಎಲ್ಲ ಸವಾಲುಗಳನ್ನು ಎದುರಿಸಲು ಸದಾ ಸನ್ನದ್ಧರಾಗಿರುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು . ಜಿಲ್ಲಾ ಹಂತದಲ್ಲಿ ನಡೆಯುವ ಎಲ್ಲ ಕೆಲಸಗಳು ಸಚಿವರ ಹಾಗು ಇಲಾಖೆಯ ಹಿರಿಯ ಅಧಿಕಾರಿಗಳ ಪರಿವೀಕ್ಷಣೆಗೆ ಒಳಪಡುತ್ತದೆ ಎಂದೂ ತಿಳಿಸಿದರು .

ಗುಣಾತ್ಮಕ ಶಿಕ್ಷಣ ಕಲ್ಪಿಸಲು ಸರ್ಕಾರವು ಹಲವು ಯೋಜನೆಗಳಡಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತಿದ್ದು ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಹೆಚ್ಚಾಗಿದೆ. ಮುಂದೆ ಇನ್ನೂ ದೊಡ್ಡ ಯೋಜನೆಗಳು ಬರುತ್ತವೆ . ಪ್ರತಿಯೊಂದು ಯೋಜನೆಯೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ನಿರಂತರ ಪರಿಶೀಲನೆ ಕೈಗೊಳ್ಳಲು ಸಹ ಜಿಲ್ಲೆಯ ಉಪನಿರ್ದೇಶಕರುಗಳಿಗೆ ಸೂಚಿಸಿದರು . ಸರ್ವಶಿಕ್ಷಾ ಅಭಿಯಾನದ ಯೋಜನೆಗಳ ಯಶಸ್ವೀ ಅನುಷ್ಠಾನಕ್ಕೆ ಆಯಾ ಡಿವೈಪಿಸಿಗಳಿಗೆ ಪೂರ್ಣ ಸಹಕಾರ ಹಾಗು ಮಾರ್ಗದರ್ಶನ ನೀಡುವಂತೆಯೂ ಉಪನಿರ್ದೇಶಕರುಗಳಿಗೆ ಸೂಚಿಸಿದರು .

ಸರ್ವಶಿಕ್ಷಾ ಅಭಿಯಾನದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಜಿಲ್ಲೆಗಳ ಪ್ರಗತಿ ಪರಾಮರ್ಶೆಯನ್ನು ಸ್ವತಃ ಕೈಗೊಳ್ಳುವುದಾಗಿಯೂ ಇದೇ ಸಂದರ್ಭದಲ್ಲಿ ಮಾನ್ಯ ಕಾರ್ಯದರ್ಶಿಗಳು ತಿಳಿಸಿದರು. ವಿಶೇಷವಾಗಿ ಪ್ರಗತಿಯಲ್ಲಿ ಹಿಂದೆ ಬಿದ್ದಿರುವ ಗುಲಬರ್ಗಾ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ತುರ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಲೂ ಸಹ ಆಯಾ ಉಪನಿರ್ದೇಶಕರಿಗೆ ಸೂಚನೆ ನೀಡಿದರು .

ಇದೇ ಸಂದರ್ಭದಲ್ಲಿ , ಮಧ್ಯಾಹ್ನ ಉಪಹಾರ ಯೋಜನೆಯು ಸಾಕಷ್ಟು ಯಾಂತ್ರಿಕವಾಗಿ ನಡೆದುಕೊಂಡು ಹೋಗುತ್ತಿದೆ. ಹಲವಾರು ವಿಷಯಗಳಲ್ಲಿ ನ್ಯಾಯಾಂಗ ಪರಿವೀಕ್ಷಣೆ ಸಹ ನಡೆಯುತ್ತಿದೆ . ಸರ್ಕಾರದ ಫ್ಲಾಗ್‌ಷಿಪ್ ಕಾರ್ಯಕ್ರಮಗಳಲ್ಲಿ ಒಂದಾದ ಮಧ್ಯಾಹ್ನ ಉಪಹಾರ ಯೋಜನೆಯ ಸಾರ್ಥಕ ಅನುಷ್ಠಾನಕ್ಕೆ ನಿರಂತರ ನಿಗಾದ ಅವಶ್ಯಕತೆಯಿದೆ ಎಂಬುದನ್ನು ಅರಿಯಲೂ ಸಹ ಉಪನಿರ್ದೇಶರಿಗೆ ಸೂಚಿಸಿದರು . ಎಲ್ಲ ಕಾರ್ಯಕ್ರಮಗಳಲ್ಲಿ ಎಸ್.ಡಿ.ಎಂ.ಸಿ. ಯವರ ಸಹಕಾರವನ್ನು ಪಡೆಯುವುದು ಸೂಕ್ತವಾಗುತ್ತದೆ ಎಂಬುದನ್ನೂ ಅರಿಯಲು ಸೂಚಿಸಿದರು .

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಯಾವ ಯಾವ ಕ್ರಮಗಳಾಗುತ್ತಿದೆ ಎಂಬ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆಯ ಅಗತ್ಯವಿದೆ . ಗಣತಿ ಅಂಕಿಅಂಶದಂತೆ ಒಟ್ಟು 60 ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಡ್ರಾಪ್ ಔಟ್ ಮಕ್ಕಳ ಸಂಖ್ಯೆ ಹೆಚ್ಚಿದೆ . ಇದಕ್ಕೆ ಕಾರಣಗಳನ್ನು ಪತ್ತೆ ಮಾಡಿ ಸೂಕ್ತ ಕ್ರಮಗಳನ್ನು ಕೈಗೊಂಡು ಡ್ರಾಪ್ ಔಟ್ ಸಂಖ್ಯೆ ನಿರಂತರವಾಗಿ ಕಡಿಮೆಯಾಗುವಂತೆ ನೋಡಿಕೊಳ್ಳುವಂತೆಯೂ ಸೂಚನೆ ನೀಡಿದರು . ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ವಿದ್ಯಾರ್ಥಿನಿಲಯಗಳನ್ನು ಶೇಕಡ 100ರಷ್ಟು ಬಳಸಿಕೊಳ್ಳಲೂ ಗಮನಹರಿಸುವಂತೆ ಸಹ ಸೂಚನೆ ನೀಡಿದರು . ಉದಾಹರಣೆಗೆ ರಾಯಚೂರು ತಾಲ್ಲೂಕೊಂದರಲ್ಲಿಯೇ

44 ಹಾಸ್ಟೆಲ್‌ಗಳು ಇದ್ದು ಡ್ರಾಪ್ ಔಟ್ ಮಕ್ಕಳನ್ನು ಶಾಲೆಗಳಿಗೆ ಮರಳಿ ತರಲು ಇವುಗಳನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದೆಂಬುದನ್ನು ಮನಗಾಣಲೂ ಸಹ ಸೂಚನೆ ನೀಡಿದರು. ಶಾಲೆಗಳ ಕಾರ್ಯನಿರ್ವಹಣೆ ಪರಿಶೀಲನೆಗೆ ನಿಯತಕಾಲಿಕ ಭೇಟಿ ಕಾರ್ಯಗಳು ಪರಿಣಾಮಕಾರಿಯಾಗಲಿವೆ . ಸಮವಸ್ತ್ರ , ಪಠ್ಯಪುಸ್ತಕ ಇತ್ಯಾದಿಗಳ ಸರಬರಾಜಿನ ಬಗ್ಗೆ , ಮಧ್ಯಾಹ್ನ ಉಪಹಾರ ಯೋಜನೆಗೆ ಅಡಿಗೆ ಕೋಣೆಗಳಲ್ಲಿ ಶುಚಿತ್ವವನ್ನು ಕಾಪಾಡುವುದು , ಗ್ಯಾಸ ಕನೆಕ್ಷನ್ , ಅಗ್ನಿ ನಂದಕ ಉಪಕರಣಗಳ ಬಳಕೆ ಬಗ್ಗೆ ಅರಿವು ಮೂಡಿಸುವುದು , ಸಾಮಾಗ್ರಿಗಳ ಸರಬರಾಜು, ಮೂಲಭೂತ ಸೌಕರ್ಯದ ಲಭ್ಯತೆ ಬಗ್ಗೆ ನಿಯತಕಾಲಿಕ ಭೇಟಿಯಿಂದ ಜಾಗೃತಿಯನ್ನು ರೂಢಿಸುವುದು ಸಾಧ್ಯ ಎಂದೂ ತಿಳಿಸಿದರು.

ಸರ್ವೋಚ್ಚ ನ್ಯಾಯಾಲಯದಲ್ಲಿ ಪಿ.ಐ.ಎಲ್ 631 ದಾವೆ ಇದ್ದು, ಇದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರ ಪರವಾಗಿ ರಾಜ್ಯದ ಎಲ್ಲ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಪ್ರಮಾಣಪತ್ರವನ್ನು ನೀಡಿರುವುದು ತಿಳಿದೇ ಇದೆ . 2012ರ ನವೆಂಬರ್ ತಿಂಗಳೊಳಗೆ ಎಲ್ಲಾ ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಾಗಿ ಸದರಿ ಮುಚ್ಚಳಿಕೆಯಲ್ಲಿ ಪ್ರಮಾಣೀಕರಿಸಲಾಗಿದೆ . ಎಲ್ಲಾ ಉಪನಿರ್ದೇಶಕರುಗಳೂ ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಇರುವಿಕೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು . ಮುಂದೆ ಇಂತಹ ಯಾವುದೇ ಪ್ರಕರಣ ಬಂದರೂ ನೇರವಾಗಿ ಉಪನಿರ್ದೇಶಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದೂ ಉಪನಿರ್ದೇಶಕರುಗಳಿಗೆ ಎಚ್ಚರಿಕೆ ನೀಡಿದರು .

ಇದೇ ಸಂದರ್ಭದಲ್ಲಿ ಪಠ್ಯಪುಸ್ತಕ ಮುದ್ರಣ ಮತ್ತು ವಿತರಣೆ ಕುರಿತಂತೆ ಮಾತನಾಡಿ , 2013–14ನೇ ಶೈಕ್ಷಣಿಕ ಸಾಲಿಗೆ ಜಿಲ್ಲೆಗೆ ಅಗತ್ಯವಿರುವ ಪಠ್ಯ ಪುಸ್ತಕಗಳ ಬೇಡಿಕೆಯನ್ನು ಈಗಾಗಲೇ ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಜಿಲ್ಲೆಗಳಿಂದ ಸಲ್ಲಿಕೆಯಾಗಿರತಕ್ಕದ್ದು, ಸಲ್ಲಿಕೆಯಾಗಿರುವ ಬೇಡಿಕೆಗಳ ಸಮರ್ಪಕತೆ ಬಗ್ಗೆ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಪೂರಕ ಅಭಿಪ್ರಾಯ ನೀಡಲಿಲ್ಲವಾದ ಕಾರಣ , ಜಿಲ್ಲೆಗಳು ತಮ್ಮ ಪುಸ್ತಕ ಬೇಡಿಕೆಯನ್ನು ಡೈಸ್ ಅಂಕಿ–ಅಂಶಕ್ಕನುಸಾರವಾಗಿ ಪುನರ್ ಪರಿಶೀಲಿಸಲು ಮತ್ತು ಯಾವುದೇ ಕಾರಣಕ್ಕೂ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪಠ್ಯ ಪುಸ್ತಕಗಳ ಕೊರತೆಯಾಗದಂತೆ ನೋಡಿಕೊಳ್ಳಲು ಮಾನ್ಯ ಕಾರ್ಯದರ್ಶಿಗಳು ಉಪನಿರ್ದೇಶಕರಿಗೆ ಸೂಚನೆ ನೀಡಿದರು .

ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡುವಾಗ ಕನಿಷ್ಠ ಪಕ್ಷ ಈ ಕೆಳಗೆ ನಮೂದಿಸಿರುವ ಎಲ್ಲ ಅಂಶಗಳನ್ನು ಕಡ್ಡಾಯವಾಗಿ ಗಮನಿಸತಕ್ಕದ್ದು ಎಂದೂ ಮಾನ್ಯ ಕಾರ್ಯದರ್ಶಿಗಳು ಉಪನಿರ್ದೇಶಕರಿಗೆ ತಾಕೀತು ಮಾಡಿದರು .

1. ಶಾಲೆಗಳಿಗೆ ಸಮವಸ್ತ್ರ ವಿತರಣೆಯಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು

2. ಎಲ್ಲಾ ಮಕ್ಕಳಿಗೆ ಪಠ್ಯಪುಸ್ತಕಗಳು ಸರಬರಾಜಾಗಿರುವ ಬಗ್ಗೆ ಮಾಹಿತಿ ಪಡೆಯುವುದು
3. ಶಾಲಾ ಬ್ಯಾಗುಗಳನ್ನು ನೀಡಿರುವ ಬಗ್ಗೆ ತಿಳಿಯುವುದು
4. ಶಾಲಾ ಕೊಠಡಿಗಳ ನಿರ್ಮಾಣ ಆಗುತ್ತಿದ್ದರೆ ಅವುಗಳನ್ನು ಪರಿಶೀಲನೆ ಮಾಡುವುದು
5. ಆದರ್ಶ ವಿದ್ಯಾಲಯಗಳಿಗೆ ಕೊಠಡಿಗಳ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದ್ದು ಕಾಮಗಾರಿ ಪ್ರಗತಿಯನ್ನು ಪರಿಶೀಲಿಸುವುದು .
6. ಕುಡಿಯುವ ನೀರು , ಶೌಚಾಲಯಗಳ ಸಮರ್ಪಕ ನಿರ್ವಹಣೆ ಬಗ್ಗೆ ಮಾಹಿತಿ ಪಡೆಯುವುದು
7. ಶೌಚಾಲಯಗಳ ಶುಚಿತ್ವಕ್ಕಾಗಿ ಈಗಾಗಲೇ ಹಣ ಬಿಡುಗಡೆ ಮಾಡಿದ್ದು, ಅವುಗಳಿಂದ ಶುಚಿತ್ವಕ್ಕೆ ಬೇಕಾದ ಸಾಮಾಗ್ರಿಗಳನ್ನು ಖರೀದಿ ಮಾಡಿ ಬಳಸುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು

ಅಜೆಂಡಾ 9 ರ ಪ್ರಕಾರ 2010–12ನೇ ಸಾಲಿನಲ್ಲಿ ಯೋಜನೆ /ಯೋಜನೆತರಡಿಯಲ್ಲಿ ಕೊಠಡಿ ನಿರ್ಮಾಣಕ್ಕಾಗಿ ಮಾಡಿರುವ ಅನುದಾನ ಈ ಕೆಳಕಂಡಂತೆ ಇದೆ. ಅನುದಾನವು ಎಸ್.ಡಿ.ಎಂ.ಸಿ. ಖಾತೆಗೆ ಜಮಾ ಆಗಬೇಕು. ಇದರಿಂದ ಅನುದಾನ ಬಳಕೆ ಆಗುತ್ತದೆ. ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಮಧುಗಿರಿ, ಶಿವಮೊಗ್ಗ, ದಾವಣಗೆರೆ, ಚಾಮರಾಜನಗರ, ಮಂಡ್ಯ, ಹಾಸನ ಚಿಕ್ಕಮಗಳೂರು, ಕೊಡಗು, ಉಡುಪಿ, ಬೆಳಗಾವಿ,ಚಿಕ್ಕೋಡಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಶಿರಸಿ, ಹಾವೇರಿ, ಯಾದಗಿರಿ, ಬಳ್ಳಾರಿ, ಕೊಪ್ಪಳ, ಬೀದರ್, ಈ ಎಲ್ಲಾ ಜಿಲ್ಲೆಗಳಲ್ಲಿ ಹಣ ಡ್ರಾ ಮಾಡಲಾಗಿದೆ. ಮೈಸೂರಿನಲ್ಲಿ ಖರ್ಚಾಗಿದೆ. ದಕ್ಷಿಣ ಕನ್ನಡ, ಗುಲಬರ್ಗಾ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಅನುದಾನ ಡ್ರಾ ಆಗಿಲ್ಲ ಎಂದು ತಿಳಿಸಿದರು. ಕೋಲಾರದಲ್ಲಿಯೂ ಅನುದಾನ ಡ್ರಾ ಆಗಿರುವುದಿಲ್ಲ. ಇನ್ನು 3 ದಿವಸಗಳಲ್ಲಿ ಹಣ ಡ್ರಾ ಮಾಡುತ್ತೇನೆಂದು ಕೋಲಾರ ಉಪನಿರ್ದೇಶಕರು ತಿಳಿಸಿದರು.

ರಾಜ್ಯ ವಲಯದ ಯೋಜನಾ ಕಾರ್ಯಕ್ರಮದಂತೆ ಅನುಷ್ಠಾನಗೊಳ್ಳುತ್ತಿರುವ ಶಿಕ್ಷಕರ ವಸತಿ ಗೃಹಗಳ ಬಗ್ಗೆ ಮಾತಾನಾಡುತ್ತಾ ಸದರಿ ಕಾರ್ಯಕ್ರಮ ಕಾಮಗಾರಿಯನ್ನು ನಿರ್ವಹಿಸುತ್ತಿರುವ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಸಂಸ್ಥೆಯು ಈವರೆಗೆ 213 ವಸತಿ ಗೃಹಗಳಲ್ಲಿ 50 ಗೃಹಗಳನ್ನು ಹಸ್ತಾಂತರಿಸಿದ್ದು 40 ವಸತಿ ಗೃಹಗಳನ್ನು ಈವರೆಗೆ ಪೂರ್ಣಗೊಳಿಸಿ ಹಸ್ತಾಂತರಿಸಿಲ್ಲ ಎಂಬ ಅಂಕಿ–ಅಂಶವನ್ನು ಗಂಭೀರವಾಗಿ ಪರಿಗಣಿಸಿ ಈ ಬಗ್ಗೆ ಉಪನಿರ್ದೇಶಕರು ಎಲ್ಲ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು . ಈಗಾಗಲೇ ಪೂರ್ಣಗೊಂಡಿರುವ ವಸತಿ ಗೃಹಗಳನ್ನು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ರವರ ಕಡೆಯಿಂದ ಪಡೆದು ಅಗತ್ಯ ಇರುವ ಶಿಕ್ಷಕರಿಗೆ ಹಂಚಿಕೆ ಮಾಡಬೇಕು. ಹಂಚಿಕೆ ಮಾಡುವಾಗ ದೂರದ ಊರಿನಿಂದ ಬರುವ ಶಿಕ್ಷಕರಿಗೆ ಅನುಕೂಲವಾಗುವಂತೆ ಮಾಡಬೇಕು.

ಇನ್ನು ಈವರೆಗೆ ಹಂಚಿಕೆಯಾಗಿರುವ ವಸತಿ ಗೃಹಗಳ ಅಂಕಿ–ಅಂಶಗಳನ್ನೂ ಹಾಗು ಕಾಮಗಾರಿ ಬಾಕಿ ಇರುವ ಅಂಕಿ–ಅಂಶಗಳನ್ನೂ ಸಭೆಯಲ್ಲಿ ಉಪನಿರ್ದೇಶಕರುಗಳಿಂದ ಪಡೆಯಲಾಯಿತು . ಅದರಂತೆ ,

- ಬೆಳಗಾಂ ಜಿಲ್ಲೆಯಲ್ಲಿ – 8 ಶಿಕ್ಷಕರಿಗೆ ಹಂಚಿಕೆ ಮಾಡಲಾಗಿದೆ .
- ಬಿಜಾಪುರ ಜಿಲ್ಲೆಯಲ್ಲಿ 8 ಶಿಕ್ಷಕರಿಗೆ ಹಂಚಿಕೆ ಮಾಡಲಾಗಿದೆ .
- ರಾಯಬಾಗ್ – ಕಾಮಗಾರಿ ಪೂರ್ಣಗೊಂಡಿರುವುದಿಲ್ಲ
- ಇಂಡಿ ತಾಲ್ಲೂಕಿನ ಗೋಳಸಂಗಿ, ತಾಂಬಾ, ಅಥರ್ಗಾ, ತಡವಲಗಾ ದಲ್ಲಿ ಹಂಚಿಕೆ ಮಾಡಿಲ್ಲ.
- ಚಿತ್ರದುರ್ಗ – ಹಂಚಿಕೆಯಾಗಿಲ್ಲ.
- ಧಾರವಾಡ 7 ಶಿಕ್ಷಕರಿಗೆ ಹಂಚಿಕೆ ಮಾಡಲಾಗಿದೆ , ಇನ್ನು 2 ಬಾಕಿ ಇದೆ.
- ಮೊರಬ, ನಲವಡಿ, 5 ಹಂಚಿಕೆಯಾಗಿದೆ.
- ಕಲಘಟಗಿ, ಸಂಗಮೇಶ್ವರ 4 ಹಂಚಿಕೆಯಾಗಿದೆ , ಇನ್ನೂ 4 ವಸತಿಗೃಹ ಹಂಚಿಕೆಯಾಗಿರುವುದಿಲ್ಲ.
- ಹಾವೇರಿಯಲ್ಲಿ ಹಂಚಿಕೆಯಾಗಿದೆ.
- ಗುಲಬರ್ಗಾ, ಕೋಲಾರ, ಕೊಪ್ಪಳ – ಹಂಚಿಕೆಯಾಗಿಲ್ಲ.
- ಬಳ್ಳಾರಿ, ಬಸವಕಲ್ಯಾಣ, ಕುಷ್ಟಗಿ, ಯಾದಗಿರಿ – ಕಾಮಗಾರಿ ಬಾಕಿ ಇದೆ

ಉಪನಿರ್ದೇಶಕರುಗಳು ಮಾತನಾಡಿ , ಹಲವು ಕಡೆ ವಿದ್ಯುತ್ ಸಂಪರ್ಕ ಹಾಗು ನೀರಿನ ವ್ಯವಸ್ಥೆಯನ್ನು ಕಲ್ಪಿಸಿರುವುದಿಲ್ಲವಾದ್ದರಿಂದ ಶಿಕ್ಷಕರು ವಸತಿ ಗೃಹಗಳ ಹಂಚಿಕೆ ಪಡೆಯಲು ಆಸಕ್ತಿ ತೋರುತ್ತಿಲ್ಲ ಎಂಬುದಾಗಿ ಸಭೆಗೆ ತಿಳಿಸಿದರು . ರಾಜೀವಗಾಂಧಿ ಹೌಸಿಂಗ್ ಕಾರ್ಪೋರೇಷನ್ ಅಧಿಕಾರಿ ಮಾತನಾಡಿ ಎಲ್ಲಾ ರೀತಿಯ ಸೌಕರ್ಯಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದರು.

ಊರಿನಿಂದ ಹೊರಗೆ ಇರುವಂತಹ ಶಾಲೆಗಳ ಹತ್ತಿರದಲ್ಲಿ ಕಟ್ಟಲಾದ ವಸತಿ ಗೃಹಗಳಿಗೆ ಎಲ್ಲಾ ರೀತಿಯ ಅನುಕೂಲತೆ ಅಂದರೆ ನೀರಿನ ಸೌಲಭ್ಯ, ವಿದ್ಯುಚ್ಛಕ್ತಿ ಸೌಕರ್ಯ ಆಳವಡಿಕೆ ಮುಖ್ಯವಾಗಿದ್ದು, ಇದನ್ನು ಕಡ್ಡಾಯವಾಗಿ ಮಾಡತಕ್ಕದ್ದು, ಹಲವಾರು ಕಟ್ಟಡಗಳಲ್ಲಿ ವಿದ್ಯುಚ್ಛಕ್ತಿ ಸಂಪರ್ಕ ಇಲ್ಲದೆ ವಸತಿ ಗೃಹಗಳು ಖಾಲಿ ಇವೆ. ಇವುಗಳ ಬಗ್ಗೆ ಜಿಲ್ಲಾ ಪಂಚಾಯತ್ ಹಾಗೂ ವಿದ್ಯುಚ್ಛಕ್ತಿ ಮಂಡಳಿಯವರೊಂದಿಗೆ ಸಮಾಲೋಚನೆ ನಡೆಸಿ ಕೂಡಲೇ ಪೂರ್ಣಗೊಳಿಸಿ ಹಸ್ತಾಂತರ ಮಾಡುವಂತೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಸಂಸ್ಥೆಯ ಪ್ರತಿನಿಧಿಗೆ ಮಾನ್ಯ ಕಾರ್ಯದರ್ಶಿಗಳು ಸೂಚಿಸಿದರು .

2010–11ನೇ ಸಾಲಿಗೆ ಕೆ.ಕೆ.ಜಿ.ಬಿ.ಬಿ. ವಸತಿ ನಿಲಯ ಕಟ್ಟಡಗಳ ನಿರ್ಮಾಣಕ್ಕಾಗಿ ಬಾಲ್ಕಿ ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ನಿವೇಶನ ಹಸ್ತಾಂತರವಾಗಿಲ್ಲ. 2009–10ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ (ರಾಜ್ಯವಲಯ) ವಿವಿಧ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ ಆಗಸ್ಟ್ 2012ರಂತೆ ಕೂಡಲೇ ನೀಡುವಂತೆ ತಿಳಿಸಿದರು. ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಒಟ್ಟು ರೂ 49 ಕೋಟಿ ಬಿಡುಗಡೆಯಾಗಿದ್ದು, ಒಟ್ಟು 921 ಕೊಠಡಿಗಳು ನಿರ್ಮಾಣವಾಗಿರಬೇಕಾಗಿದೆ. ಕೇವಲ 14 ಜಿಲ್ಲೆಗಳಲ್ಲಿ ನಿರ್ಮಾಣ ಹಂತ ಮುಗಿದಿದ್ದು ಉಳಿದ ಜಿಲ್ಲೆಗಳಲ್ಲಿ ಕೂಡಲೇ ಕ್ರಮ ಕೈಗೊಂಡು ವರದಿ ಮಾಡಲು ತಿಳಿಸಿದರು.

ನಂತರ , 2009–10ನೇ ಸಾಲಿನ ಪಂಚ ಸೌಲಭ್ಯದಡಿ ಕೊಠಡಿ ನಿರ್ಮಾಣ ಮತ್ತು ಪೀಠೋಪಕರಣಕ್ಕಾಗಿ ಬಿಡುಗಡೆಯಾದ ಅನುದಾನದ ಭೌತಿಕ ಪ್ರಗತಿ ಪರಿಶೀಲಿಸಲಾಗಿ ರಾಮನಗರ, ಚಿಕ್ಕಬಳ್ಳಾಪುರ, ಮಧುಗಿರಿ, ಶಿವಮೊಗ್ಗ, ಚಿತ್ರದುರ್ಗ ದಾವಣಗೆರೆ, ಚಾಮರಾಜನಗರ, ಚಿಕ್ಕಮಗಳೂರು, ಉಡುಪಿ, ಬೆಳಗಾಂ, ಚಿಕ್ಕೋಡಿ, ಬಾಗಲಕೋಟೆ, ದಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ, ಸಿರಸಿ, ಗುಲಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬೀದರ್ ಜಿಲ್ಲೆಗಳಲ್ಲಿ ಪ್ರಗತಿ ತೀರಾ ಕುಂಠಿತವಾಗಿದ್ದು, ಡಿಸೆಂಬರ್ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಲು ಗಡುವನ್ನು ನೀಡಲಾಯಿತು .

ಸಭೆಯ ಸಂದರ್ಭದಲ್ಲಿ , ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಶಾಲೆಗಳಲ್ಲಿ ತಿಳುವಳಿಕೆ ಮೂಡಿಸಲು ಅನುವಾಗುವಂತೆ ಜಿಲ್ಲಾ ಉಪನಿರ್ದೇಶಕರುಗಳಿಗೆ 'ತಂಬಾಕು ಮುಕ್ತ ಬೆಂಗಳೂರು' ಎಂಬ ಎನ್ ಜಿ ಒ ವತಿಯಿಂದ ಅದರ ಮುಖ್ಯಸ್ಥರು ಹಾಗು ಆನ್ಕಾಲಜಿ ಕನ್ಸಲ್ಟೆಂಟ್‌ರವರಾದ ಡಾ: ಯು. ವಿಶಾಲ್ ರಾವ್‌ರವರಿಂದ ಪ್ರಾತ್ಯಕ್ಷಿಕೆ ಮುಖಾಂತರ ಸಂವಾದ ಕಾರ್ಯಕ್ರಮ ಇತ್ತು . ಸದರಿಯವರು ಮಾತನಾಡಿ ತಂಬಾಕು ಸೇವನೆ ಭಾರತದಲ್ಲಿ ಅತೀ ದೊಡ್ಡ ಸಮಸ್ಯೆಯಾಗಿದೆ. ಭಾರತದಲ್ಲಿ ಪ್ರತಿ ದಿನ 15 ವರ್ಷದೊಳಗಿನ 5,500 ಮಕ್ಕಳು ತಂಬಾಕು ಸೇವಿಸುತ್ತಾರೆ. ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ ನಿಯಂತ್ರಣ ಕಾಯಿದೆ 2003ರ ಪ್ರಕಾರ ಈ ಕೆಳಕಂಡ ಸೆಕ್ಷನ್‌ಗಳಲ್ಲಿ ಯುವಕರಿಗ ತಂಬಾಕು ಸಿಗದಂತೆ ಶಿಕ್ಷಣ ಸಂಸ್ಥೆಗಳು ಕ್ರಮ ಕೈಗೊಳ್ಳಬಹುದಾಗಿರುತ್ತದೆ . ಸೆಕ್ಷನ್ 4– ರ ಪ್ರಕಾರ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಿದೆ., ಕಾಟ್ರಾ ಸೆಕ್ಷನ್ 6 ರ ಪ್ರಕಾರ( 1) 19 ವರ್ಷದ ಕೆಳಗಿನವರಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ನಿಷಿದ್ಧ 2) ಶಿಕ್ಷಣ ಸಂಸ್ಥೆಗಳ ಸುತ್ತ 100 ಮೀಟರ್‌ಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧ. ಈ ಬಗ್ಗೆ ಶಿಕ್ಷಣ ಸಂಸ್ಥೆಗಳು ಕೆಲವು ಕ್ರಮಗಳನ್ನು ಪಾಲಿಸಬೇಕು. ಸಂಸ್ಥೆಗಳ ಆವರಣವನ್ನು ಧೂಮಪಾನ ರಹಿತವನ್ನಾಗಿ ಮಾಡುವುದು (ಶೇಕಡ 100ರಷ್ಟು) ಯಾವುದೇ ಕಾರಣಕ್ಕೂ ಧೂಮಪಾನ ಮಾಡುವುದಕ್ಕೆ ಅವಕಾಶವೇ ನೀಡಬಾರದು ಎಂದು ಹೇಳಿದರು. ತಂಬಾಕು ಸೇವನೆಯಿಂದ ಯಾವ ರೀತಿ ಮನುಷ್ಯನಿಗೆ ಹಾನಿಕರ ಎಂಬುದರ ಬಗ್ಗೆ ಪ್ರಾಯೋಗಿಕವಾಗಿ ಕ್ಯಾನ್ಸರ್ ಪೀಡಿತ ಇಬ್ಬರು ವ್ಯಕ್ತಿಗಳನ್ನು

ಸಭೆಗೆ ಕರೆಸಿ ಅವರ ಅನಿಸಿಕೆಗಳನ್ನು ಸಭೆಯ ಗಮನಕ್ಕೆ ತಂದರು. ಈ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದರೆ ಎಲ್ಲಾ ಜಿಲ್ಲೆಗಳ ಹಂತದ ಅಧಿಕಾರಿಗಳು ತಮ್ಮ ಜಿಲ್ಲೆಯನ್ನು ತಂಬಾಕು ಮುಕ್ತ ಜಿಲ್ಲೆಯನ್ನಾಗಿ ಮಾಡುವುದು ಮುಖ್ಯ . ಎಲ್ಲಾ ಶಾಲೆಗಳಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸುತ್ತೋಲೆಯನ್ನು ಕಳುಹಿಸಿ ಇದರ ಬಗ್ಗೆ ಜಾಗೃತರಾಗುವಂತೆ ನೋಡಿಕೊಳ್ಳಲು ಮನವಿ ಮಾಡಿದರು .

ರಾಷ್ಟ್ರೀಯ ವೃತ್ತಿ ಶಿಕ್ಷಣ ಅರ್ಹತಾ ಚೌಕಟ್ಟು ರಾಜ್ಯ ಸಮಿತಿಯ ಶ್ರೀ ಪುರುಷೋತ್ತಮ ರವರು ಮಾತನಾಡಿ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಡಿಯಲ್ಲಿ ಪ್ರೌಢ ಶಿಕ್ಷಣದಲ್ಲಿ ವೃತ್ತೀಕರಣ ಅಳವಡಿಸುವ ನಿಟ್ಟಿನಲ್ಲಿ 'ರಾಷ್ಟ್ರೀಯ ವೃತ್ತಿ ಶಿಕ್ಷಣ ಅರ್ಹತಾ ಚೌಕಟ್ಟು' ಎಂಬ ನೂತನ ಯೋಜನೆಯನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಿದೆ. ಎನ್.ವಿ.ಇ.ಕ್ಯೂ.ಎಫ್ ಪ್ರಾಯೋಗಿಕ ಯೋಜನೆಯನ್ನು ಕೇಂದ್ರ ಸರ್ಕಾರವು ಹರಿಯಾಣ ಮತ್ತು ವೆಸ್ಟ್ ಬೆಂಗಾಲ್ ರಾಜ್ಯಗಳಲ್ಲಿ ಎನ್.ವಿ.ಇ.ಕ್ಯೂ.ಎಫ್. ಪೈಲೆಟ್ ಯೋಜನೆಯನ್ನು 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಅನುಷ್ಠಾನ ಮಾಡಿದೆ . ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಯ 9ನೇ ತರಗತಿಯಿಂದ(ಮೊದಲನೆ ಹಂತ) ಪ್ರಾರಂಭಿಸಲಾಗುವುದು. ಈ ಪೈಲೆಟ್ ಯೋಜನೆಯಿಂದ ಪಡೆಯುವ ಅನುಭವದಿಂದ ವಿವಿಧ ಕೋರ್ಸುಗಳನ್ನು ಅಭಿವೃದ್ಧಿಪಡಿಸಿ ರಾಷ್ಟ್ರದಲ್ಲಿ ಅನುಷ್ಠಾನ ಮಾಡಲಾಗುವುದು. ರಾಜ್ಯದಲ್ಲಿ ಎನ್.ವಿ.ಇ.ಕ್ಯೂ.ಎಫ್. ರಾಜ್ಯ ಸಮಿತಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಉಪನಿರ್ದೇಶಕರ ಮೂಲಕ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಈ ಮಾರ್ಗದರ್ಶಿ ಯೋಜನೆಯಿಂದ ಗಳಿಸಿದ ಅನುಭವ, ಕಲಿಕೆ, ಫಲಿತಾಂಶವನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿರುವ ಹರಿಯಾಣ ಮತ್ತು ವೆಸ್ಟ್ ಬೆಂಗಾಲ್ ರಾಜ್ಯಗಳ ಫಲಿತಾಂಶದ ಜೊತೆ ಪರಾಮರ್ಶಿಸಿ ಈ ಯೋಜನೆಯನ್ನು 2013–14 ರಲ್ಲಿ ರಾಜ್ಯದ ಇತರೆ ಶಾಲೆಗಳಲ್ಲಿ ವಿಸ್ತರಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದು ಹೇಳಿದರು.

ಸನ್ಮಾನ್ಯ ಆಯುಕ್ತರು ಮಾತನಾಡಿ ಇನ್ನು ಮುಂದೆ ಪ್ರತಿ ತಿಂಗಳು ಜಿಲ್ಲೆಗಳ ಪ್ರಗತಿ ಬಗ್ಗೆ ಸಭೆ ನಡೆಸಲಾಗುವುದು. ಉಪನಿರ್ದೇಶಕರು ತಮ್ಮ ಹಂತದಲ್ಲಿ ಬಿ.ಇ.ಓ ಜೊತೆ ಸೇರಿ ಸಭೆ ನಡೆಸಬೇಕು. ಪ್ರತಿ ತಿಂಗಳ 4ನೇ ತಾರೀಖಿನ ಒಳಗೆ ಪ್ರ ಗತಿಯನ್ನು ಆಯುಕ್ತರ ಕಛೇರಿಗೆ ಕಳುಹಿಸಿ ಕೊಡಬೇಕು. ನಂತರ ರಿವ್ಯೂ ಮಾಡಿ ಸಭೆಯನ್ನು ಪ್ರತಿ ತಿಂಗಳು ಮಾಡಲಾಗುವುದು.. ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾ ಉಪನಿರ್ದೇಶಕರೇ ಇನ್ನು ಮುಂದೆ ಅಫಿಡವಿಟ್ ಹಾಕಬೇಕಾಗುವ ಸಾಧ್ಯತೆ ಇದೆ.. ಸರ್ವಶಿಕ್ಷಾ ಅಭಿಯಾನದ ಮೂಲಕ ನಡೆಯುತ್ತಿರುವ ಕಾರ್ಯಕ್ರಮದ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಶೌಚಾಲಯ, ಸರಿಯಾದ ಕುಡಿಯುವ ನೀರು ಸೌಲಭ್ಯ ಇಲ್ಲದೆ ಇರುವ ಶಾಲೆಗಳಲ್ಲಿ ಕೂಡಲೇ ವ್ಯವಸ್ಥೆ ಮಾಡಬೇಕು. ಬಿ.ಇ.ಓ. ಸಿ.ಆರ್.ಪಿ. ಮತ್ತು ಬಿ.ಆರ್.ಸಿ. ಗಳ ಸಹಕಾರದಿಂದ ಶಾಲೆಗಳಲ್ಲಿ ಪ್ರತಿಯೊಂದು ಶಾಲೆಗೆ ಹೋಗಿ ಶೌಚಾಲಯದ ನಿರ್ವಹಣೆ ಸರಿಯಿದೆಯೇ ಎಂದು

ನೋಡಬೇಕು. ಕುಡಿಯುವ ನೀರು ಮತ್ತು ಶೌಚಾಲಯಗಳ ನಿರ್ವಹಣೆ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರಿಂದ ಕ್ರಿಯಾ–ಯೋಜನೆಯನ್ನು ನಮೂನೆಯುಲ್ಲಿ ತಯಾರು ಮಾಡಿ ಸೆಪ್ಟೆಂಬರ್ ಒಳಗೆ ಪಡೆಯಬೇಕು. ಶಾಲೆಗಳಲ್ಲಿ ಶೌಚಾಲಯಗಳ ನಿರ್ವಹಣೆ ಸರಿಯಾಗಿ ಮಾಡಲಾಗುತ್ತೆ ಎಂದು ಹೆಡ್ ಮಾಸ್ಟರ್‌ರವರಿಂದ ಒದಗಿಸಲಾಗುವ ನಮೂನೆಯಲ್ಲಿ ಧೃಢೀಕರಣ ಸಹಿ ತೆಗೆದುಕೊಳ್ಳಬೇಕು. ಉಪನಿರ್ದೇಶಕರುಗಳು ಬಿ.ಇ.ಓ. ಗಳಿಗೆ ಹೇಳಿ ಕೆಲಸ ಮಾಡಿಸಬೇಕು ಎಂದು ಸೂಚಿಸಿದರು.

ಎಲ್ಲಾ ಜಿಲ್ಲೆಗಳ ಆರ್.ಐ.ಡಿ.ಎಫ್. 14,15,16 ರ ಕಾರ್ಯಕ್ರಮದ ಭೌತಿಕ ಪ್ರಗತಿಯನ್ನು ಸಭೆಯ ಸಂದರ್ಭದಲ್ಲಿ ಪರಾಮರ್ಶಿಸಲಾಯಿತು . ಎಲ್ಲಿ ಸರ್ಕಾರಿ ನಿವೇಶನದ ಹಸ್ತಾಂತರ ಬಾಕಿ ಇದೆ , ಅಲ್ಲಿ ತುರ್ತು ಸರ್ಕಾರಿ ನಿವೇಶನ ಪಡೆಯಲು ಸಂಬಂಧಿತ ಇಲಾಖೆಯನ್ನು ವ್ಯಾಪ್ತಿಯ ಬಿ.ಇ.ಓರವರು ತ್ವರಿತವಾಗಿ ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲು ಉಪನಿರ್ದೇಶಕರಿಗೆ ಮಾನ್ಯ ಆಯುಕ್ತರು ಸೂಚಿಸಿದರು .

**<u>ದಿನಾಂಕ 12.9.2012 ರಂದು ಮಧ್ಯಾಹ್ನ ಶಿಕ್ಷಕರ ಸದನದಲ್ಲಿ ನಡೆದ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರ ಸಭಾ ನಡಾವಳಿ</u>**

ಮೊದಲಿಗೆ ಯೋಜನಾ ಶಾಖೆಯ ಉಪನಿರ್ದೇಶಕರು , ಹೊಸದಾಗಿ ಕಾರ್ಯ ವಹಿಸಿಕೊಂಡಿರುವ ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರನ್ನು ಸಭೆಗೆ ಸ್ವಾಗತಿಸಿದರು. ನಂತರ ರಾಜ್ಯ ಯೋಜನಾ ನಿರ್ದೇಶಕರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸರ್ವ ಶಿಕ್ಷಣ ಅಭಿಯಾನದ ಈ ಕೆಳಗಿನಂತೆ ಪ್ರಮುಖ ವಿಷಯಗಳನ್ನು ಚರ್ಚಿಸುತ್ತಾ, ಆರ್ಥಿಕ ಪ್ರಗತಿ ಬಹಳ ಕುಂಠಿತವಾಗಿದೆ. ಈಗಾಗಲೇ ಅರ್ಧ ವರ್ಷಆಗಿರುವುದರಿಂದ 70% ಕೆಲಸವಾಗಬೇಕಿತ್ತು. ಈ ನಿಟ್ಟಿನಲ್ಲಿ ಎಲ್ಲರೂ ತ್ವರಿತವಾಗಿ ಕ್ರಮವಹಿಸುವಂತೆ ಸೂಚಿಸಿದರು.

1. 2012–13 ನೇ ಸಾಲಿನ ಪ್ರೊಕ್ಯೂರ್‌ಮೆಂಟ್‌ಗಳ ವಿವರ
2. ಶಾಲಾ ಲಭ್ಯತೆ– 2012–13 ನೇ ಸಾಲಿನಲ್ಲಿ 2272 ಶಾಲೆಗಳಲ್ಲಿ 1852 ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಇರುತ್ತದೆ. ಉನ್ನತೀಕರಿಸಿದ ಎಲ್ಲಾ ಶಾಲೆಗಳಲ್ಲಿಯೂ 8 ನೇ ತರಗತಿ ಇರುವಂತೆ ಕ್ರಮವಹಿಸಬೇಕಾಗಿದೆ. ಉನ್ನತೀಕರಿಸಿದ ಶಾಲೆಗೆ ಒಂದು ಟಿಜಿಟಿ. (ವಿಜ್ಞಾನ ಮತ್ತು ಗಣಿತ) ಶಿಕ್ಷಕರ ಹುದ್ದೆ ಮತ್ತು ಒಂದು ಹೆಚ್ಚುವರಿ ಕೊಠಡಿ ಮಂಜೂರಾಗಿರುತ್ತದೆ. ಎಲ್ಲಾ ವಿಭಾಗಗಳಲ್ಲಿ ದಾಖಲಾತಿಯನ್ನು ಪರಿಶೀಲಿಸಿದಾಗ ಒಟ್ಟು ರಾಜ್ಯದಲ್ಲಿ 420 ಶಾಲೆಗಳಲ್ಲಿ ಜೀರೋ ದಾಖಲಾತಿ ಬಂದಿದ್ದು ಈ ಶಾಲೆಗಳಿಗೆ ದಾಖಲಾಗಬೇಕಾಗಿದ್ದ ಮಕ್ಕಳು ಯಾವ ಶಾಲೆಗೆ ದಾಖಲಾಗಿದ್ದಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಸಂಬಂಧಿಸಿದ ಉಪನಿರ್ದೇಶಕರು ಈ ಕುರಿತು ಮಾಹಿತಿಯನ್ನು ನೀಡಬೇಕೆಂದು ಸೂಚಿಸಿದರು. ಜೀರೋ ದಾಖಲಾತಿ ಇರುವವರು ಕಾಂಪೋಸಿಟ್ ಶಾಲೆ ಇರುವಲ್ಲಿ ಹಿ.ಪ್ರಾ.ಶಾಲೆಯ

ಬೋರ್ಡ್‌ನ್ನು ಬದಲಾಯಿಸುವುದು. ಮುಂದಿನ ವರ್ಷ ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡುವಂತೆ ಕ್ರಮ ವಹಿಸಬೇಕೆಂದು ಸೂಚಿಸಿದರು.

3. ಶಾಲೆಯಿಂದ ಹೊರಗುಳಿದ ಮಕ್ಕಳ ಕುರಿತು– ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಎಷ್ಟು ಮಂದಿ ಶಾಲೆಗೆ ಸೇರಿದ್ದಾರೆ ಮತ್ತು ಚೈಲ್ಡ್ ಟ್ರಾಕಿಂಗ್‌ನಲ್ಲಿ ಎಷ್ಟು ಮಕ್ಕಳ ವಿವರಗಳು ದೊರೆತಿವೆ ಎಂಬ ಬಗ್ಗೆ ವರದಿಯನ್ನು ಕಳುಹಿಸಿಕೊಡುವಂತೆ ಸೂಚಿಸುತ್ತಾ, ಚಿಕ್ಕಬಳ್ಳಾಪುರ, ಮಧುಗಿರಿ ಮತ್ತು ತುಮಕೂರು ಜಿಲ್ಲೆಗಳ ಸಾಧನೆ ಬಹಳ ಕುಂಠಿತವಾಗಿದ್ದು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು .

4. ವಿಶೇಷ ಅಗತ್ಯವುಳ್ಳ ಮಕ್ಕಳ ಬಗ್ಗೆ ಮಾತನಾಡುತ್ತಾ, ಎಲ್ಲಾ 202 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ವೈಧ್ಯಕೀಯ ಮೌಲ್ಯಾಂಕನ ಶಿಬಿರವನ್ನು ನಡೆಸಲಾಗಿದೆ. ಅಗತ್ಯವಿರುವ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ಅಲಿಂಕೋ (ಭಾರತ ಸರ್ಕಾರದ ಅಧೀನ ಸಂಸ್ಥೆ) ಯ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗು ಗುರುತಿಸಿರುವ ಎಲ್ಲಾ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವೈಯಕ್ತಿಕ ಶೈಕ್ಷಣಿಕ ಯೋಜನೆಯನ್ನು (ಐ.ಇ.ಪಿ) ಸಿದ್ಧಪಡಿಸಲಾಗುತ್ತಿದೆ. ಈ ಸಂಬಂಧ ದಿನಾಂಕ 3.9.2012 ರಿಂದ 15.09.2012 ರವರೆಗೆ ಎಲ್ಲಾ ಶಾಲೆಗಳಲ್ಲಿ ಐ.ಇ.ಪಿ. ಸಿದ್ಧತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಹಾಗು ಸದರಿ ಐ.ಇ.ಡಿ.ಯ 18000 ಮಕ್ಕಳಿಗೆ ಜಿಲ್ಲಾ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹಾಗು ಸಿ.ಡಬ್ಲ್ಯುಎಸ್.ಎನ್. ಮಕ್ಕಳ ಚೈಲ್ಡ್ ಟ್ರಾಕ್ ಸಾಫ್ಟ್‌ವೇರ್ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

5. ಸಿ.ಎ.ಎಲ್.ಸಿ. – 2011–12 ನೇ ಸಾಲಿನ ಎ.ಎಂ.ಸಿ. ಅನುದಾನ ಬಳಕೆ ಮತ್ತು ಉಳಿಕೆ ಬಗ್ಗೆ 11 ಜಿಲ್ಲೆಯವರು ಮಾಹಿತಿ ಸಲ್ಲಿಸಿರುವುದಿಲ್ಲ. ಇನ್ನು ಒಂದು ವಾರದಲ್ಲಿ ಈ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡುವಂತೆ ತಿಳಿಸಿದರು. 2012–13 ನೇ ಸಾಲಿನಲ್ಲಿ ಸಿ.ಎ.ಎಲ್.ಸಿ. ಶಾಲೆಗಳಲ್ಲಿನ ಕೊಠಡಿ ಸಿದ್ಧತೆ ಮತ್ತು ಅನುದಾನ ಬಿಡುಗಡೆಯಾಗಿದೆ. ಈ ಬಗ್ಗೆ ಕ್ರಮ ಮಾಡುವಂತೆ ಸೂಚಿಸಿದರು.

6. ಸಿವಿಲ್ ಕಾಮಗಾರಿಗಳ ಪ್ರಗತಿಯ ಬಗ್ಗೆ ಮಾತನಾಡುತ್ತಾ, ಎಲ್ಲಾ ಜಿಲ್ಲಾ ಉಪನಿರ್ದೇಶಕರು ಡೈಸ್‌ನ ಮಾಹಿತಿಯಂತೆ ಶಾಲಾ ಕಟ್ಟಡ ಕಟ್ಟಲು ಪ್ರಸ್ತಾವನೆಯನ್ನು ಕಳುಹಿಸುವಾಗಲೇ ಜಾಗದ ವ್ಯಾಜ್ಯ ಇದೆಯೇ ಇಲ್ಲವೇ ಎಂಬ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಕಳುಹಿಸಿಕೊಡುವುದು. ಹಾಗು ಕೊಪ್ಪಳ ಜಿಲ್ಲೆಯಲ್ಲಿ ಇನ್ನು ಎರಡು ದಿವಸಗಳಲ್ಲಿ ಕಾಮಗಾರಿಗಳ ಪ್ರಾರಂಭ ಆಗಬೇಕು. (ಕ್ರಮ: ಶ್ರೀ. ಕೃಷ್ಣೇಗೌಡ, ಇಂಜಿನಿಯರ್) ಕಾಮಗಾರಿ ಘಟಕ ವೆಚ್ಚ ಪ್ರತಿ ವರ್ಷ ವ್ಯತ್ಯಾಸವಾಗಿರುತ್ತದೆ. ಬಾಕಿಯಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಉಪನಿರ್ದೇಶಕರವರ ಜವಾಬ್ದಾರಿಯಾಗಿರುವುದರಿಂದ ತ್ವರಿತವಾಗಿ ಕ್ರಮಗೊಳಿಸುವುದು.

7. ಕೆಜಿಬಿವಿ.– 2012–13 ನೇ ಸಾಲಿನಲ್ಲಿ 71 ಕೆ.ಜಿ.ಬಿ.ವಿ. ವಸತಿ ಶಾಲೆಗಳಿಗೆ ಬಿಡುಗಡಯಾಗಿರುವ ಅನುದಾನದ ವಿವರಗಳ ಬಗ್ಗೆ ಮಾತನಾಡುತ್ತಾ, ಕೆ.ಜಿ.ಬಿ.ವಿ. ನಲ್ಲಿ ಹಾಜರಾತಿ ಬಹಳ ಕಡಿಮೆಯಾಗಿದೆ. ಇದರ ಬಗ್ಗೆ ಕ್ರಮ ವಹಿಸುವುದು. ಈ ಬಗ್ಗೆ ಪ್ರತಿ ತಿಂಗಳು ವರದಿಯನ್ನು ಕಳುಹಿಸಿಕೊಡುವಂತೆ ಸೂಚಿಸಿದರು.

8. ನಿರ್ಧಿಷ್ಟ ವರ್ಗದ ಮಕ್ಕಳಿಗಾಗಿ ತೆರೆದಿರುವ ವಸತಿ ಶಾಲೆಗಳಲ್ಲಿ ದಾಖಲಾತಿಯ ಗುರಿ 100 ಇದ್ದು, ಶಾಲೆಗಳಲ್ಲಿನ ಪ್ರಸಕ್ತ ದಾಖಲಾತಿ ಮಾಹಿತಿಯ ಬಗ್ಗೆ ಮಾತನಾಡುತ್ತಾ, ಒಟ್ಟು 05 ಜಿಲ್ಲೆಗಳಲ್ಲಿ ಮಂಜೂರಾಗಿರುತ್ತದೆ. ಒಂದೊಂದು ಶಾಲೆಗೆ 27 ಲಕ್ಷ ಹಣ ಮಂಜೂರು ಆಗಿರುತ್ತದೆ. ಒಳ್ಳೆಯ ಸೌಲಭ್ಯವಿರುವ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ನಡೆಸುವುದು. ಸರ್ಕಾರದಿಂದ ಮಂಜೂರು ಆಗಿರುವ ಹಣ ಸದ್ವಿನಿಯೋಗ ಮಾಡಿಕೊಳ್ಳುವಲ್ಲಿ ಕ್ರಮ ವಹಿಸುವುದು. ಸದರಿ ಐದು ಜಿಲ್ಲೆಗಳಾದ ಶಿವಮೊಗ್ಗ, ಬೆಂಗಳೂರು ದಕ್ಷಿಣ, ಮೈಸೂರು, ಮಂಗಳೂರು ಮತ್ತು ಧಾರವಾಡ ಜಿಲ್ಲೆಯ ಉಪನಿರ್ದೇಶಕರು ಎರಡು ವಾರದಲ್ಲಿ ಚರ್ಚಿಸಬೇಕೆಂದು ಸೂಚಿಸಿದರು.

9. 2012–13 ನೇ ಶೈಕ್ಷಣಿಕ ಮಾಹಿತಿ ವೇಳಾಪಟ್ಟಿಯ ಬಗ್ಗೆ ಮಾತನಾಡುತ್ತಾ, ದಿನಾಂಕ 25.10.2012 ರಿಂದ 30.10.12 ರವರೆಗೆ ಎಲ್ಲಾ ಜಿಲ್ಲೆಗಳಲ್ಲಿ 2011–12 ನೇ ಮಾಹಿತಿಗೂ 2012–13 ರ ಶೈಕ್ಷಣಿಕ ಮಾಹಿತಿಗೂ ವಿಶ್ಲೇಷಣೆ ನಡೆಸಿ ಪರಿಶೀಲಿಸಬೇಕಾಗಿ ತಿಳಿಸಿದರು.

10. 2012–13 ನೇ ಸಾಲಿನ ಶೈಕ್ಷಣಿಕ ಮಾಹಿತಿಗಳ ಆಧಾರದ ಮೇಲೆ ಶಾಲಾ ಅಭಿವೃದ್ಧಿ ಯೋಜನೆಯನ್ನು ಹಾಗೂ ಶೈಕ್ಷಣಿಕ ಯೋಜನೆಗಳನ್ನು ತಯಾರಿಸಲು ಅಗತ್ಯವಾದ ಮಾಹಿತಿಗಳನ್ನು ಸಿದ್ಧಪಡಿಸುವಂತೆ ತಿಳಿಸಿದರು. ಹಾಗು ಜಿಲ್ಲಾ ಶೈಕ್ಷಣಿಕ ಮಾಹಿತಿಗಳನ್ನು ದೃಢೀಕರಿಸಿ ರಾಜ್ಯಮಟ್ಟಕ್ಕೆ ಸಲ್ಲಿಸುವಂತೆ ಸೂಚಿಸಿದರು.

11. 2012–13 ನೇ ಸಾಲಿನ , 'ಶಾಲೆಗಾಗಿ ನಾವು–ನೀವು' ಕಾರ್ಯಕ್ರಮದ ಸಾಫ್ಟ್‌ವೇರ್‌ನಲ್ಲಿ ಅಗತ್ಯ ಡೇಟಾ ಎಂಟ್ರಿ ಕಾರ್ಯವನ್ನು ದಿನಾಂಕ 15.9.2012 ರೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು.

12. ಆರ್.ಎಮ್.ಎಸ್.ಎ. ಬಗ್ಗೆ ಮಾತನಾಡುತ್ತಾ, ಈ ಬಗ್ಗೆ ನೀಡಲಾಗಿರುವ ಅನುದಾನಗಳಿಂದ ಶಾಲೆಗಳಲ್ಲಿರುವ ಬದಲಾವಣೆಗಳ ದಾಖಲೀಕರಣ ಮಾಡುವಂತೆ ತಿಳಿಸಿದರು. ಪ್ರತಿ ಜಿಲ್ಲೆಯಿಂದ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸುವಂತೆ ತಿಳಿಸಿದರು.

13. ಇಕೋ–ಕ್ಲಬ್ ಚಟುವಟಿಕೆಗಳು ನಡೆಯುತ್ತಿದ್ದು, ಇದನ್ನು ಕಲಿಕಾ ಪೂರಕ ಚಟುವಟಿಕೆಗಾಗಿ ನಡೆಯುವಂತೆ ಕ್ರಮವಹಿಸುವುದು ಹಾಗು ಎಲ್ಲಾ ಜಿಲ್ಲೆಗಳಲ್ಲಿ ಕೆನರಾ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ಪ್ರಾರಂಭಿಸುವಂತೆ ಸೂಚಿಸಿದರು. ಈ ಬಗ್ಗೆ ಕೆನರಾ ಬ್ಯಾಂಕ್ ನ ಕೇಂದ್ರ ಕಛೇರಿಗೆ ಪತ್ರವನ್ನು ನೀಡಲಾಗುವುದೆಂದು ತಿಳಿಸಿದರು.

14. ಹೆಣ್ಣು ಮಕ್ಕಳ ಪ್ರೋತ್ಸಾಹಕ ಯೋಜನೆಗೆ ಅಗತ್ಯವುಳ್ಳ ಮಾಹಿತಿಯನ್ನು ನಿಗಧಿತ ಸಮಯದೊಳಗೆ ಸಿದ್ಧಪಡಿಸಲು ಅಗತ್ಯ ಮಾಹಿತಿಯನ್ನು ನೀಡುವಂತೆ ಸೂಚಿಸಿದರು.
15. ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಮೊಬೈಲ್ ಸಂಪರ್ಕಕ್ಕಾಗಿ ಸಿಮ್ ಕಾರ್ಡ ಅನ್ನು ನೀಡಲಾಗುವುದೆಂದು ತಿಳಿಸಿದರು ಮತ್ತು ಸದರಿ ಸಂಪರ್ಕಕ್ಕೆ ತಗುಲುವ ಮಾಸಿಕ ವಂತಿಗೆ ಕುರಿತಂತೆ ಶೀಘ್ರದಲ್ಲಿಯೇ ನಿಯಮವನ್ನು ರೂಪಿಸಲಾಗುವುದೆಂದು ತಿಳಿಸಿದರು .
16. ಆದರ್ಶ ವಿದ್ಯಾಲಯಗಳಲ್ಲಿ 8 ನೇ ತರಗತಿ ಪ್ರಾರಂಭವಾಗಿದೆ. 2011–12 ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಶಾಲೆಗಳಿಗೆ ಡೆಸ್ಕ್ ಖರೀದಿ ಸಂಬಂಧ ಉಪನಿರ್ದೇಶಕರು ಟೆಂಡರ್‌ನ್ನು ಕರೆಯುವಂತೆ ಸೂಚಿಸಿದರು. ಹಾಗೂ ನಿವೇಶನ ಲಭ್ಯವಿಲ್ಲದಿರುವ ಆದರ್ಶ ಶಾಲೆಗಳ ವಿವರವನ್ನು ನೀಡುವಂತೆ ಸೂಚಿಸಿದರು.

**ನಂತರ ನಿರ್ದೇಶಕರು (ಪ್ರೌಢ ಶಿಕ್ಷಣ) , ಇವರು ಸಭೆಯ ಕಾರ್ಯಕಲಾಪಗಳನ್ನು ಮುಂದುವರೆಸುತ್ತಾ ,**

1. ಗುರುಕಾರ್ಯ ಸಾರ್ಥಕ ವರ್ಷಾಚರಣೆ 125 ನೇ ಸಂಬಂಧ ವಿಶ್ಲೇಷಣಾ ಕಾರ್ಯಕ್ರಮಗಳನ್ನು ಉಪನಿರ್ದೇಶಕರ ಹಂತದಲ್ಲಿಯೇ ಹಮ್ಮಿಕೊಳ್ಳುವಂತೆ ಸೂಚಿಸಿದರು.
2. ಇನ್ನು ಮುಂದೆ ಕಛೇರಿಗಳಿಂದ ಪತ್ರ ವ್ಯವಹಾರ ಮಾಡುವಾಗ ಪ್ರತಿ ಪತ್ರದ ತಲೆಬರಹದಲ್ಲಿ " ಶಿಕ್ಷಣದಲ್ಲಿನ ಎಲ್ಲರ ಉತ್ಸಾಹ ; ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ" ಎಂದು ಬರೆಯುವಂತೆ ತಿಳಿಸಿದರು.
3. 2012–13 ನೇ ಸಾಲಿನ ಇಲಾಖೆಯ ಕಲಿಕಾ ಪೂರಕ ಚಟುವಟಿಕೆಗಳಾದ ಪ್ರತಿಭಾ ಕಾರಂಜಿ, ಕಠಿಣ ಪದಗಳ ಉಕ್ತಲೇಖನ ಇವೆಲ್ಲವುದರ ಬಗ್ಗೆ ಕ್ರಮ ವಹಿಸಬೇಕೆಂದು ಸೂಚಿಸಿದರು.
4. ಸಿಬ್ಬಂದಿ.4 ಶಾಖೆಯಿಂದ ನೀಡಲಾಗಿರುವ 23 ಅಜೆಂಡಾಗಳು ಬಹಳ ಮುಖ್ಯವಾಗಿವೆ . ಮಾಹಿತಿಯನ್ನು ನೀಡದೇ ಇರುವವರು ಇನ್ನು ಎರಡು ದಿವಸದೊಳಗೆ ಇ.ಮೇಲ್ ನಲ್ಲಿ ಕಳುಹಿಸುವಂತೆ ಸೂಚಿಸಿದರು.
5. ಸರ್ಕಾರಿ ಪ್ರೌಢ ಶಾಲೆಯಲ್ಲಿ ಅಳವಡಿಸಲಾಗಿರುವ ಅಗ್ನಿನಂದಕಗಳಿಗೆ , ನಿಗಧಿತ ದಿನಾಂಕ ಮುಗಿದಿದ್ದರೆ ರೀಫಿಲ್ ಮಾಡಿಸುವುದು. ಹಾಗು ಈ ಬಗ್ಗೆ ವರ್ಷಕ್ಕೆ ಒಂದು ಬಾರಿ ಬೇರೊಬ್ಬರಿಗೆ ತರಬೇತಿ ನೀಡುವಂತೆ ಕ್ರಮ ವಹಿಸುವುದು ಎಂದು ತಿಳಿಸಿದರು .
6. ಖಾಸಗಿ ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಖಾಲಿ ಹುದ್ದೆಗಳನ್ನು ಶೂನ್ಯಗೊಳಿಸಬೇಕು . ಈ ಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಮಾತ್ರ ಅಗತ್ಯವಿರುವ ಖಾಸಗಿ ಅನುದಾನಿತ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸನಬಹುದು ಎಂದು ಸಭೆಯಲ್ಲಿ ಎತ್ತಿದ ಪ್ರಶ್ನೆಗೆ ಸ್ಪಷ್ಟೀಕರಣ ನೀಡಲಾಯಿತು .
7. ಸರ್ಕಾರಿ ಶಾಲೆಗಳಲ್ಲಿನ ಹೆಚ್ಚುವರಿ ಹುದ್ದೆ ಸ್ಥಳಾಂತರ ಕುರಿತಂತೆ ಫಾರಂ 23 ರಲ್ಲಿ ಮಾಹಿತಿಯನ್ನು ತಪ್ಪದೇ ಕಳುಹಿಸಲು ಸೂಚಿಸಲಾಯಿತು .

8. ಮಾನ್ಯತೆ ನವೀಕರಣ ಕುರಿತಂತೆ ಒಂದು ಯೋಜನೆಯನ್ನು ರೂಪಿಸಿಕೊಂಡು ಕ್ರಮ ಕೈಗೊಳ್ಳಲು ಜೂನ್ 2012ರಲ್ಲಿ ನಡೆದ ಡಿಡಿಪಿಐ/ಬಿಇಒಗಳ ಸಭೆಯಲ್ಲಿ ತಿಳಿಸಲಾಗಿತ್ತು . ಮಾನ್ಯತೆ ಪಡೆಯದೆ ಶಾಲೆ ನಡೆಯುತ್ತಿದ್ದರೆ ಅವು ಅನಧಿಕೃತ ಶಾಲೆಗಳಾಗುತ್ತವೆ. ಅಂತಹ ಶಾಲೆಗಳನ್ನು ಮುಚ್ಚಿಸಲು ಹಾಗು ಸಾರ್ವಜನಿಕರಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಲು ಕ್ರಮಕೈಗೊಂಡು , ಈ ಬಗ್ಗೆ 30.9.2012 ರೊಳಗೆ ಮಾಹಿತಿಯನ್ನು ಕಳುಹಿಸಿಕೊಡುವಂತೆ ತಿಳಿಸಿದರು. 30/09/2012 ರೊಳಗೆ ಮಾನ್ಯತೆ ನವೀಕರಿಸದಿದ್ದಲ್ಲಿ ಹಾಗೂ ಸಕಾರಣವಿಲ್ಲವಾದಲ್ಲಿ ಅಂತಹ ಡಿಡಿಪಿಐ ಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ .

**ನಂತರ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) , ಇವರು ಸಭೆಯ ಕಾರ್ಯಕಲಾಪಗಳನ್ನು ಮುಂದುವರೆಸುತ್ತಾ ,**

ರೀಜಿನಲ್ ಇನ್ಸಿಟ್ಯೂಟ್ ಆಫ್ ಇಂಗ್ಲೀಷ್, ಬೆಂಗಳೂರು ರವರು ಪ್ರಾಥಮಿಕ ಶಿಕ್ಷಣದಲ್ಲಿ ಆಂಗ್ಲ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿರುತ್ತಾರೆ. ಇದುವರೆಗೂ ಒಬ್ಬ ಶಿಕ್ಷಕರನ್ನು ಮಾತ್ರ ನಿಯೋಜನೆ ಮಾಡಲಾಗಿದೆ ಎಂಬುದರ ಕುರಿತು ಖೇದ ವ್ಯಕ್ತಪಡಿಸಿ ಅಗತ್ಯ ಕ್ರಮಕ್ಕೆ ಸೂಚಿಸಿದರು .

ಹಾಗೆಯೇ , ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಖಾಲಿಯಿರುವ ಖಾಲಿಹುದ್ದೆ ಮಾಹಿತಿಯನ್ನು ಈಗಾಗಲೇ ಕಳುಹಿಸಲಾಗಿರುವ ನಮೂನೆಯಲ್ಲಿ 17.9.2012 ರೊಳಗೆ ಕಳುಹಿಸಿಕೊಡುವಂತೆ ತಿಳಿಸಿದರು. ಹೊಸದಾಗಿ 6 ನೇ ತರಗತಿ ಶಾಲೆ ತೆರೆಯುವ ಬಗ್ಗೆ ಮೂಲಭೂತ ಸೌಕರ್ಯ ಇರುವ ಶಾಲೆಗಳ ಪ್ರಸ್ತಾವನೆಯನ್ನು ಮಾತ್ರ ಕಳುಹಿಸಿಕೊಡುವಂತೆ ಸೂಚಿಸಿದರು.

ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ , ಇವರು ಮಾತನಾಡಿ , ಧಾರವಾಡದಲ್ಲಿ 76% ಮಾತ್ರ ಅಡುಗೆ ಕೋಣೆಗಳ ನಿರ್ಮಾಣವಾಗಿದೆ. ಕೆಲವು ಜಿಲ್ಲೆಗಳಲ್ಲಿ ಇನ್ನು ಅಡುಗೆ ಕೋಣೆ ನಿರ್ಮಿಸಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸುವುದು. ಈ ಹಿಂದೆ ನೀಡಲಾಗಿರುವ ಅಡುಗೆ ಪಾತ್ರೆಗಳು ಹಳೆಯದಾಗಿದ್ದು, ಹಾಳಾಗಿದ್ದರೆ ಹೊಸ ಪಾತ್ರೆಗಳನ್ನು ತೆಗೆದುಕೊಳ್ಳಲು ರೂ. 5000/– ಹಣ ನೀಡಲಾಗುವುದೆಂದು ತಿಳಿಸಿದರು. ಶಾಲೆಗಳಿಗೆ ಹೆಚ್ಚುವರಿ ಗ್ಯಾಸ್ ಸಿಲೆಂಡರ್ ನೀಡುವ ಬಗ್ಗೆ ಜರೂರಾಗಿ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ , ಇವರು ಮಾತನಾಡಿ , ಪಠ್ಯ ಪುಸ್ತಕಗಳ ಸರಬರಾಜಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯವರು 44000 ಪಠ್ಯಪುಸ್ತಕ ಕೊರತೆಯಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಜಿಲ್ಲೆಯವರು ನೀಡಿರುವ ಶಾಲೆಗಳ ಪಟ್ಟಿಯಂತೆ ಪುಸ್ತಕಗಳನ್ನು ನೀಡಲಾಗಿದೆ. ಈ ರೀತಿಯಾದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯವರು ಪಠ್ಯಪುಸ್ತಕಗಳ ಇಂಡೆಂಟ್ ನೀಡುವಾಗ ಸರಿಯಾದ ಅಂಕಿಸಂಖ್ಯೆಗಳನ್ನು ನೀಡಬೇಕಾಗಿ ಸೂಚಿಸಿದರು. ಈ ಬಗ್ಗೆ ಇಲಾಖೆಯಿಂದ 20 ನೇ ದಿನಾಂಕದಂದು ನೋಡಲ್ ಅಧೀಸರ್ ಸಭೆ ಕರೆಯಲಾಗಿದೆ. ಸರಿಯಾದ ಮಾಹಿತಿ ನೀಡಲು ತಿಳಿಸಿದರು.

ಅಪರ ಆಯುಕ್ತರು (ಆಡಳಿತ) , ಇವರು ಮಾತನಾಡಿ , ಆಡಳಿತ ಶಾಖೆಯಿಂದ ಕಳುಹಿಸಲಾಗಿರುವ ಅಜೆಂಡಾಗಳಿಗೆ ಉತ್ತರವನ್ನು ಕಳುಹಿಸಿಲ್ಲದೇ ಇರುವವರು ಇನ್ನೆರಡು ದಿನಗಳೊಳಗೆ ಕಳುಹಿಸಿಕೊಡುವಂತೆ ತಿಳಿಸಿದರು.

ನಿರ್ದೇಶಕರು, ಅಲ್ಪಸಂಖ್ಯಾತ ನಿರ್ದೇಶನಾಲಯ , ಇವರು ಮಾತನಾಡಿ , ಶೈಕ್ಷಣಿಕ ಸ್ಪರ್ಧೆಗಳಿಗೆ ರೂ. 8,00,000/- ಅನುದಾನ ಬಿಡುಗಡೆಯಾಗಿದೆ. ಈ ತಿಂಗಳ ಕೊನೆಯಲ್ಲಿ ಖರ್ಚು ಮಾಡಿ ವೋಚರ್ಸ್‌ಗಳನ್ನು ಕಳುಹಿಸಿಕೊಡುವಂತೆ ತಿಳಿಸಿದರು. ಅಲ್ಪ ಸಂಖ್ಯಾತ ಶಾಲೆಗಳವರು ಗಣಕಯಂತ್ರ ಖರೀದಿಸಲು ಹಣ ನೀಡಲಾಗುವುದು. ಈ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ತಿಳಿಸಿದರು. ಈ ಬಗ್ಗೆ ಇದುವರೆವಿಗೂ ಬಂದಿರುವ 03 ಜಿಲ್ಲೆಗಳ ಹೊರತುಪಡಿಸಿ ಉಳಿದ ಜಿಲ್ಲೆಗಳವರು ಕಳುಹಿಸಿಕೊಡುವಂತೆ ತಿಳಿಸಿದರು. ಮದರಸ/ಮಕ್ತಾಬ್/ದಾರುಲ ಉಲೂಮ್‌ಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆ (ಎಸ್.ಪಿ.ಕ್ಯೂ.ಇ.ಎಮ್) ಯನ್ನು ಅನುಷ್ಠಾನಗೊಳಿಸುವುದಾಗಿ ತಿಳಿಸಿದರು.

ಸಹನಿರ್ದೇಶಕರು, ಪರೀಕ್ಷಾ ಮಂಡಳಿ, ಇವರು ಮಾತನಾಡಿ ,ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮಪಡಿಸುವ ಸಲುವಾಗಿ ಎಲ್ಲಾ ಉಪನಿರ್ದೇಶಕರು ಕ್ರಮ ವಹಿಸುವಂತೆ ತಿಳಿಸಿದರು.

ಉಪನಿರ್ದೇಶಕರು , ಶಿಕ್ಷಕರ ಕಲ್ಯಾಣ ನಿಧಿ , ಇವರು ಮಾತನಾಡಿ ,ಎಲ್ಲಾ ಜಿಲ್ಲೆಗಳಿಂದ ಶಿಕ್ಷಕರಿಂದ ಸದಸ್ಯತ್ವಕ್ಕೆ ವಸೂಲಾಗಿರುವ ಹಣವನ್ನು ಆದಷ್ಟು ಜರೂರಾಗಿ ಕಳುಹಿಸಿಕೊಡುವಂತೆ ತಿಳಿಸಿದರು. ಹಾಗು ಟಿ.ಬಿ.ಎಫ್. ವತಿಯಿಂದ ಪ್ರತಿ ಶಿಕ್ಷಕರಿಗೂ ಲ್ಯಾಪ್‌ಟ್ಯಾಪ್‌ನ್ನು ಖರಿದಿಸಲು ಬಡ್ಡಿ ರಹಿತ ರೂ. 10,000/- ನೀಡಲಾಗುವುದೆಂದು ಪತ್ರವನ್ನು ಈಗಾಗಲೇ ಎಲ್ಲಾ ಜಿಲ್ಲೆಗಳಿಗೂ ಕಳುಹಿಸಿಕೊಡಲಾಗಿದೆ. ಈ ಸೌಲಭ್ಯವನ್ನು ಎಲ್ಲರೂ ಉಪಯೋಗಿಸಿಕೊಳ್ಳುವಂತೆ ಸೂಚಿಸಿದರು.

<u>ಮಾನ್ಯ ಆಯುಕ್ತರು , ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ,</u>

- ಇಂಗ್ಲೀಷ್ ತರಬೇತಿಗೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನಿಯೋಜಿಸುವುದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಈ ಬಗ್ಗೆ ಹೊರಡಿಸಲಾಗಿರುವ ಪತ್ರವನ್ನು ಎಲ್ಲಾ ಬಿ.ಇ.ಓ. ರವರಿಗೂ ಇ-ಮೇಲ್ ಮುಖೇನ ಕಳುಹಿಸಿಕೊಡುವಂತೆ ಸೂಚಿಸಿದರು. (ಕ್ರಮ: ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
- ಶಿಕ್ಷಕರನ್ನು ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ನಿಯೋಜನೆ ಅಥವಾ ಪ್ರತಿ ನಿಯೋಜನೆ ಮಾಡಿರುವ ಪ್ರಕರಣಗಳನ್ನು ತಾವು ಸ್ವತಃ ಪರಾಮರ್ಶಿಸಲು ಅನುವಾಗುವಂತೆ ಮಾಹಿತಿ ಸಲ್ಲಿಸಲು ಒಂದು ನಮೂನೆಯನ್ನು ಎಲ್ಲರಿಗೂ ಕಳುಹಿಸಿಕೊಡಲಾಗುವುದು. ನಿಯೋಜನೆಯ ಕಾರಣ ಸಮಂಜಸವಾಗಿರಬೇಕು ಇಲ್ಲದಿದ್ದರೆ ಸಂಬಂಧಿಸಿದ ಅಧಿಕಾರಿಯವರೇ ಜವಾಬ್ದಾರರಾಗುತ್ತಾರೆ. ನಿಯೋಜನೆ ಅನಿವಾರ್ಯ ಎಂಬ ಸಂದರ್ಭದಲ್ಲಿಯೂ , ನಿಯೋಜನೆ ಮಾಡುವುದು ವ್ಯಕ್ತಿಗಾಗಿ ಅಲ್ಲ – ಶಾಲೆಗಾಗಿ ಎಂಬ ತತ್ವದ ಹಿನ್ನೆಲೆ ಕಡ್ಡಾಯ ಎಂದು ತಿಳಿಸಿದರು. (ಕ್ರಮ : ಎಲ್ಲಾ ಇಲಾಖಾ ಅಧಿಕಾರಿಗಳು)
- ಈ ವರ್ಷ ಪಠ್ಯಪುಸ್ತಕ ಸರಬರಾಜಿಗಾಗಿ ಶೇಕಡ 1 ರಷ್ಟು ಹೆಚ್ಚಾಗಿ ಕೇಳಿರುವ ಜಿಲ್ಲೆಗಳ ಶಾಲೆಗಳ ಪಟ್ಟಿಯನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿದರು. ಹಾಗು ಪಠ್ಯ ಪುಸ್ತಕಗಳ ಇಂಡೆಂಟ್ ಹಾಗು ಇನ್ನಿತರೇ ವಿಷಯಗಳ

ಬಗ್ಗೆ ಎಲ್ಲಾ ಉಪನಿರ್ದೇಶಕರಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸುವಂತೆ ಸೂಚಿಸಿದರು. (ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ಪಠ್ಯ ಪುಸ್ತಕ)

- ಅಪರ ಆಯುಕ್ತರು (ಆಡಳಿತ) ರವರ ಹಂತದಲ್ಲಿ ಪ್ರತಿ ತಿಂಗಳು 10 ನೇ ದಿನಾಂಕದಂದು ಪತ್ರಾಂಕಿತ ಸಹಾಯಕರುಗಳ ಸಭೆ ಕರೆಯಬೇಕಾಗಿ ಸೂಚಿಸಿದರು. ಜಿಲ್ಲೆಗಳಲ್ಲಿ ಪತ್ರಾಂಕಿತ ಸಹಾಯಕರು ಹಾಗು ವ್ಯವಸ್ಥಾಪಕರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲವೆಂದು ಸೂಚಿಸಿ ,ಹೆಚ್ಚಿನ ಕಾರ್ಯಭಾರ ಪ್ರತ್ಯಾಯೋಜನೆಗೆ ನಿರ್ದಿಷ್ಟ ರೂಪುರೇಷೆ ಸಿದ್ದವಾಗಬೇಕೆಂದೂ ತಿಳಿಸಿದರು . (ಕ್ರಮ : ಅಪರ ಆಯುಕ್ತರು (ಆಡಳಿತ))
- ಉಪನಿರ್ದೇಶಕರು (ಯೋಜನೆ) ರವರು ಪ್ರತಿ ತಿಂಗಳು 15 ನೇ ದಿನಾಂಕದಂದು ಉಪನಿರ್ದೇಶಕರ ಸಭೆಯನ್ನು ಕರೆಯಬೇಕಾಗಿ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು .

**ನಿರ್ದೇಶಕರು (ಪ್ರೌಢ ಶಿಕ್ಷಣ)** **ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**

**ಆಯುಕ್ತರು ,**

**ಸಾರ್ವಜನಿಕ ಶಿಕ್ಷಣ ಇಲಾಖೆ**